ಇಲಾಖೆಯ ಆಡಳಿತಾತ್ಮಕ ವ್ಯಾಪ್ತಿಯಲ್ಲಿಯೂ ಬರುತ್ತದೆ. ಈ ವಿಚಾರದಲ್ಲಿ ಮಾನ್ಯ ಶಾಸಕರು ಮಂಡಿಸಿರುವ ಸೂಚನೆಯನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಲಾಗುತ್ತಿದೆ.

ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಸಂಬಂಧಪಟ್ಟಂತೆ ದಕ್ಷಿಣ ಕನ್ನಡ ಜಿಲ್ಲೆಯ ಕಾಪು ಕ್ಷೇತ್ರದಲ್ಲಿ 3 ಕಟ್ಟಡ ಕಾಮಗಾರಿಗಳನ್ನು ಹಾಗೂ ವಿಧಾನ ಸಭಾ ಕ್ಷೇತ್ರದ 30.00 ಲಕ್ಷ ರೂ.ಗಳ ರಸ್ತೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ 10 ರಸ್ತೆ ಕಾಮಗಾರಿಗಳನ್ನು 1995-96ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ. ವಿಧಾನ ಸಭಾ ಕ್ಷೇತ್ರದ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ನವೆಂಬರ್ 1995ರಲ್ಲಿ ವಿಶೇಷ ಯೋಜನೆಯಾಗಿ ಹಮ್ಮಿಕೊಳ್ಳಲಾಗಿದ್ದು, ಇತ್ತೀಚೆಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸಾಲಿನಲ್ಲಿ ಒಟ್ಟು 14.50 ಲಕ್ಷ ರೂ.ಗಳ ಅನುದಾನವನ್ನು ಕಾಪು ಕ್ಷೇತ್ರಕ್ಕೆ ನಿಗಧಿಪಡಿಸಿದ್ದು, ಜನವರಿ 1996ರ ಕೊನೆಯ ವೇಳೆಗೆ 10.51 ಲಕ್ಷರೂ.ಗಳ ವೆಚ್ಚವನ್ನು ಮಾಡಲಾಗಿದೆ. ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವುದಿಲ್ಲ. 150 ಚೀಲ ಸಿಮೆಂಟ್ ಹಾಗೂ 1.5 ಟನ್ ಉಕ್ಕನ್ನು ಕಾಮಗಾರಿಗಾಗಿ ನೀಡಲಾಗಿದೆ. ಇವುಗಳ ಕೊರತೆ ಇರುವುದಿಲ್ಲ. ಡಾಂಬರಿನ ಕಾಮಗಾರಿಗಾಗಿ 80 ಮೆಟ್ರಿಕ್ ಟನ್ ಡಾಂಬರು ಬೇಕಾಗಿದ್ದು, ಡಾಂಬರನ್ನು ಕೊಂಡು ಕೊಳ್ಳುವುದಕ್ಕೆ ಈಗಾಗಲೇ ಮುಂಗಡ ಹಣವನ್ನು ಸಂಬಂಧಪಟ್ಟ ಸರಬರಾಜು ಕಂಪನಿಗೆ ನೀಡಲಾಗಿದ್ದು, ಡಾಂಬರಿನ ಸರಬರಾಜುವಿಗೆ ದಕ್ಷಿಣ ವಲಯ ವ್ಯಾಪ್ತಿಗೆ ಒಳಪಟ್ಟಂತೆ, ಒಟ್ಟು 1600 ಲಕ್ಷ ರೂ.ಗಳ ಮುಂಗಡ ಹಣವನ್ನು ತೈಲ ಕಂಪನಿಗೆ ಡಾಂಬರಿನ ಸರಬರಾಜಿಗಾಗಿ ನೀಡಲಾಗಿದೆ. 1995-96ನೇ ಸಾಲಿನಲ್ಲಿ ನಿಗಧಿಪಡಿಸಿದ ಅನುದಾನವನ್ನು ಪೂರ್ಣವಾಗಿ ಮಾರ್ಚ್ 1996ರ ಒಳಗಾಗಿ ಉಪಯೋಗಿಸಿ ಕೊಳ್ಳಲಾಗುವುದು.

(ಎ) ಶಿಗ್ಗಾಂವ ತಾಲ್ಲೂಕು ಕುನ್ನೂರು ಗ್ರಾಮ ಸರ್ಕಾರ ಪ್ರೌಢಶಾಲೆಗೆ ಸ್ವಂತ ಕಟ್ಟಡ.

ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ ಕ್ಷೇತ್ರ) : ಶಿಗ್ಗಾಂವ್ ತಾಲ್ಲೂಕು ಕುನ್ನೂರು ಗ್ರಾಮದಲ್ಲಿ ಕಳೆದ 3 ವರ್ಷಗಳಿಂದ ಸರ್ಕಾರಿ ಪ್ರೌಢಶಾಲೆ ನಡೆಯುತ್ತಿದೆ. ಸದರಿ ಪ್ರೌಢ ಶಾಲಾ ಕಟ್ಟಡಕ್ಕಾಗಿ ಗ್ರಾಮದ ದಾನಿಗಳಾದ ಶ್ರೀಮಲ್ಲಿಕಾರ್ಜುನಗೌಡ ಹೆಚ್. ಪಾಟೀಲ್ ಇವರು 2 ಎಕರೆ ಜಮೀನನ್ನು ದಾನವಾಗಿ ಕೊಟ್ಟಿದ್ದಾರೆ ಮತ್ತು ಶಾಲೆಗೆ ಅವರ ಹೆಸರನ್ನು ನಾಮಕರಣ ಮಾಡಲು ವಿನಂತಿಸಿದ್ದಾರೆ. ಶಾಲಾ ಕಟ್ಟಡಕ್ಕೆ ನಾಮಕರಣ ಮಾಡಲು ಸರ್ಕಾರದವರು ನಿಗದಿಪಡಿಸಿದ ಹಣವನ್ನು ಜಮೀನಿನ ಕಿಮ್ಮತ್ತು ಸೇರಿ ಭರಿಸಲು ತಯಾರಿದ್ದಾರೆ. ಶಾಲಾ ಸುಧಾರಣಾ ಸಮಿತಿಯಲ್ಲೂ ಈ ಬಗ್ಗೆ ಒಪ್ಪಿಗೆ ನೀಡಲಾಗಿದೆ. ಈ ವಿಚಾರದಲ್ಲಿ ಮಾನ್ಯ ಶಿಕ್ಷಣ ಸಚಿವರು ಧಾರವಾಡ ಜಿಲ್ಲಾ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡುವ ಹೇಳಿಕೆಯನ್ನು ಸದನದಲ್ಲಿ ನೀಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಸ್. ಎಂ. ನಬಿ (ಸಣ್ಣ ಕೈಗಾರಿಕೆ ಸಚಿವರು) (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಯಾವುದೇ ದಾನಿಗಳ ಹೆಸರನ್ನು ಶಾಲಾ ಕಟ್ಟಡಕ್ಕೆ ಇಡಲು ಕಟ್ಟಡದ ಅಂದಾಜು ವೆಚ್ಚದ 1/3 ಭಾಗವನ್ನು ದಾನಿಗಳು ಭರಿಸಬೇಕಾಗುತ್ತದೆ.

ಪ್ರಸ್ತುತ ಶಿಗ್ಗಾಂವ ತಾಲ್ಲೂಕಿನ ಕುನ್ನೂರು ಗ್ರಾಮದಲ್ಲಿ ದಾನಿಗಳಾದ ಮಲ್ಲಿಕಾರ್ಜುನ ಗೌಡ ಹೆಚ್. ಹಾಟೀಲ್ ಇವರು 2 ಎಕರೆ ಜಮೀನು ಕೊಟ್ಟಿರುವುದು ಅವರ ಹೆಸರನ್ನು ಸದರಿ ಕಟ್ಟಡಕ್ಕೆ ಇಡಲು ವಿಸಂತಿಸಿದ್ದಾರೆ. ಎರಡು ಎಕರೆ ಜಮೀನು ಅಂದಾಜು ಮೌಲ್ಯವನ್ನು ಕಂದಾಯ ಇಲಾಖೆಯಿಂದ ಪಡೆದು ಮತ್ತು ಕಟ್ಟಡದ ಒಟ್ಟು ಅಂದಾಜು ಮೌಲ್ಯವನ್ನು ತಿಳಿದು ಎರಡುಎಕರೆ ಜಮೀನಿನ ಅಂದಾಜು ಬೆಲೆ ಹಾಗೂ ದಾನಿಗಳು ಕಟ್ಟಡ ಕಟ್ಟಲು ನೀಡಲಾದ ದಾನದ ಮೊತ್ತ ಕಟ್ಟಡದ ಅಂದಾಜು ½ ಭಾಗ ಆದ ಪಕ್ಷದಲ್ಲಿ ದಾನಿಗಳ ಹೆಸರನ್ನು ಸದರಿ ಸರ್ಕಾರಿ ಪ್ರೌಢ ಶಾಲೆಗೆ ಇಡಲು ಆದೇಶ ಹೊರಡಿಸಲಾಗುವುದು.

(ಏ) ರಾಜ್ಯ ಸರ್ಕಾರಿ ನೌಕರರ ಕ್ರೀಡಾ ತಂಡಗಳಿಗೆ ದಿನಭತ್ಯೆ ಮತ್ತು ಪ್ರಯಾಸ ಭತ್ಯೆ ಮಂಜೂರು.

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ, ಅಖಿಲಭಾರತ ಸರ್ಕಾರೀ ನೌಕರ ಕ್ರೀಡಾ ಕೂಟದಲ್ಲಿ ಭಾಗವಹಿಸುವ ರಾಜ್ಯ ಸರ್ಕಾರಿ ನೌಕರರ ಕ್ರೀಡಾ ತಂಡಗಳಿಗೆ ಹಾಗೂ ನೌಕರಿಗೆ ಹಾಲಿ ಜಾರಿಗೆ ತಂದಿರುವ ನಿಯಮಗಳಿಂದಾಗಿ ರಾಜ್ಯಸರ್ಕಾರೀ ನೌಕರ ಕ್ರೀಡಾ ತಂಡಗಳು ಭಾಗವಹಿಸಲು ಹಾಗೂ ಭಾಗವಹಿಸುವಂಥ ನೌಕರರಿಗೆ ದಿನಭತ್ಯೆ ಮತ್ತು ಪ್ರವಾಸ ಭತ್ಯೆಗಳನ್ನು ಮಂಜೂರುಮಾಡಲು ತೊಂದರೆಯಾಗಿದೆ. ಈ ಬಗ್ಗೆ ರಾಜ್ಯಸರ್ಕಾರೀ ನೌಕರರ ಸಂಘ ಯುವ ಜನ ಸೇವಾ ಮತ್ತು ಕ್ರೀಡಾ : ನಿರ್ದೇಶನಾಲಯವಿಂದ ಹಾಗೂ ನೌಕರರಿಂದ ಹಲವಾರು ಮನವಿಗಳನ್ನು ಸಲ್ಲಿಸಿ ಹಾಲಿ ಜಾರಿಯಲ್ಲಿರುವ ನಿಯಮವನ್ನು ರದ್ದುಗೊಳಿಸಿ ಈ ಬಗ್ಗೆ ಒಂದು ಸ್ಪಷ್ಟ ನಿಯಮವನ್ನೇ ಜಾರಿಗೊಳಿಸಬೇಕಾಗಿ ಕೋರಿದ್ದಾರೆ. ಇದರಿಂದಾಗಿ ತಾಲ್ಲೂಕು, ಜಿಲ್ಲಾ ಏಳಾಗೆ ಹೊಗಬಹುದಾದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜಯಯಾದ ಕ್ರೀಡಾ ತಂಡಗಳಿಗೆ ಹಾಗೂ ನೌಕರರಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಈ ವಿಷಯವನ್ನು ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಅಜಯಕುಮಾರ್ ಸರನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಸರ್ಕಾರೀ ಆದೇಶ ಸಂಖ್ಯೆ:ಎಫ್‌ಡಿ 13 ಎಸಆರಎಸ್ 94 ದಿನಾಂಕ 16-12-94 ರಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳು ಮತ್ತು ಒಲಂಪಿಕ್ ಸಂಸ್ಥೆಯವರು ನಡೆಸುವ ಕ್ರೀಡಾ ಕೂಟಗಳಲ್ಲಿ ಭಾಗವಹಿಸುವ ಸರ್ಕಾರಿ ನೌಕರರಿಗೆ ಮಾತ್ರ ದಿನಭತ್ಯೆ ಮತ್ತು ಪ್ರವಾಸ ಭತ್ಯೆ ಮತ್ತು ಇತರೆ ಸವಲತ್ತುಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಅಖಿಲ ಭಾರತ ನಾಗರೀಕ ಸೇವಾ ಸಂಸ್ಕೃತಿ ಮತ್ತು ಕ್ರೀಡಾ ಮಂಡಲಿ ನಡೆಸುವ ರಾಷ್ಟ್ರೀಯ ಮಟ್ಟದ ಸರ್ಕಾರೀ ನೌಕರರ ಕ್ರೀಡಾ ಕೂಡಿ, ರಾಷ್ಟ್ರೀಯ ಮಹತ್ವದ ಕ್ರೀಡಾ ಕೂಟಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ. ಇದರಿಂದಾಗಿ ಈ ಕ್ರೀಡಾ ಕೂಟಗಳಲ್ಲಿ ಭಾಗವಹಿಸುವ ಸರ್ಕಾರಿ ನೌಕರರಿಗೆ ದಿನಭತ್ಯೆ ಮತ್ತು ಪ್ರವಾಸ ಭತ್ಯೆಗಳನ್ನು ಒದಗಿಸುವ ಅವಕಾಶವಿರುವುದಿಲ್ಲ. ಸರ್ಕಾರಿ ನೌಕರರಿಗೆ ಆಗುವ ತೊಂದರೆಗಳನ್ನು ಸರಿಪಡಿಸಿ ಸೂಕ್ತ ಮಾರ್ಪಾಡುಗಳನ್ನು ಮಾಡಲು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.